MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 21-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಹೊಸ ಬೆಳೆಯ ಮೆಣಸಿನಕಾಯಿ ಆವಕ ಹೆಚ್ಚಳ

ಹೊಸ ಬೆಳೆಯ ಬ್ಯಾಡಗಿ, ಗುಂಟೂರು ಮೆಣಸಿನಕಾಯಿ ಆವಕ ಪ್ರಾರಂಭವಾಗಿದ್ದು, ಈಗ ಆವಕ ಹೆಚ್ಚಳವಾಗಲಾರಂಭವಾಗಿದೆಯೆನ್ನಲಾಗಿದ್ದು, ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಆವಕವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಉತ್ತಮ ಬೆಳೆಯಾಗಿದೆಯೆನ್ನಲಾಗಿದ್ದು, ದರ ಅಲ್ಪ ಪ್ರಮಾಣದ ಇಳಿಕೆಯಾಗಿದೆ. ಮುಂದಿನ ತಿಂಗಳಲ್ಲಿ ಆವಕ ಹೆಚ್ಚಳವಾದಂತೆ ದರ ಇನ್ನೂ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## ಗೋಧಿ, ಅದರ ಉತ್ಪಾದನೆಗಳ ದರದ ಮೇಲೆ ನಿರಂತರ ಸರಕಾರಿ ನಿಗಾ

ಗೋಧಿ ಹಾಗೂ ಅದರ ಉತ್ಪಾದನೆಗಳ ಮಾರುಕಟ್ಟೆ ದರ ಹೆಚ್ಚಳವಾಗುತ್ತಿದ್ದು, ಸರಕಾರ ದರದ ಮೇಲೆ ನಿರಂತರ ನಿಗಾ ವಹಿಸುತ್ತಿದೆಯೆನ್ನಲಾಗಿದೆ. ದರ ಹೆಚ್ಚಳ ಸರಕಾರ ಗಮನಿಸುತ್ತಿದ್ದು, ದರ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಲಿದೆಯೆನ್ನಲಾಗಿದೆ. ಸರಕಾರಿ ದಾಸ್ತಾನಿನಿಂದ ಮುಕ್ತ ಮಾರುಕಟ್ಟೆಗೆ ಗೋಧಿ ಬಿಡುಗಡೆ ಮತ್ತಿತರ ಕ್ರಮಗಳನ್ನು ಸರಕಾರ ಕೈ ಗೊಳ್ಳುವ ಸಾಧ್ಯತೆಗಳಿವೆಯೆನ್ನಲಾಗಿದೆ. ಮುಂದಿನ ಬೆಳೆಯ ಕಟಾವಿನಲ್ಲಿ ಬಂಪರ್ ಉತ್ಪಾದನೆಯ ನಿರೀಕ್ಷೆಯಿದ್ದು ಕಟಾವಿನ ನಂತರ ಪೂರೈಕೆ ಹೆಚ್ಚಳವಾದಾಗ ದರ ಇಳಿಕೆಯಾಗುವ ಸಾಧ್ಯತೆಯಿದೆ.

## ಗೋಡಂಬಿ ದೇಶೀ ಆಂತರಿಕ ಬಳಕೆ ವೃದ್ಧಿ

ಗೋಡಂಬಿಯ ದೇಶೀ ಆಂತರಿಕ ಬಳಕೆ ವರ್ಷದಿಂದ ವರ್ಷಕ್ಕೆ ಗಣನೀಯ ಹೆಚ್ಚಳವಾಗುತ್ತದೆಯೆನ್ನಲಾಗಿದೆ. ಕೋವಿಡ್ ನಂತರ ಬಳಕೆ ಹಾಗೂ ದೇಶೀ ಮಾರಾಟ ಹೆಚ್ಚಳ ಕಂಡಿದೆ. ಈ ವರ್ಷ ದೇಶೀ ಬಳಕೆ ವೃದ್ಧಿಯಾಗಲಿದೆಯೆನ್ನಲಾಗಿದೆ. ಇತರ ಗೋಡಂಬಿ ಉತ್ಪಾದಕ ಹಾಗೂ ಸಂಸ್ಕರಿಸುವ ದೇಶಗಳಲ್ಲಿ ಭಾರತದಂತೆ ಸ್ವದೇಶಿ ಬೇಡಿಕೆ ದೊಡ್ಡ ಮಟ್ಟದಲ್ಲಿಲ್ಲ. ಭಾರತ ದೊಡ್ಡ ಮಟ್ಟದ ಜಾಗತಿಕ ಗೋಡಂಬಿ ಬಳಕೆದಾರ ದೇಶವಾಗಿರುವುದು ಇಲ್ಲಿನ ಗೋಡಂಬಿ ಸಂಸ್ಕರಣೆದಾರರಿಗೆ ಅನುಕೂಲಕರವಾಗಿದೆ. ಜಾಗತಿಕ ಆರ್ಥಿಕ ಹಿಂಜರಿತದಿಂದ ಜಾಗತಿಕ ಬೇಡಿಕೆ ಹಾಗೂ ದರಗಳೂ ಕುಸಿತ ಕಂಡಿದೆ. ಆದರೆ ಕಚ್ಚಾ ಗೋಡಂಬಿ ದರ, ಸಂಸ್ಕರಿತ ತಿರುಳಿನ ದರದಷ್ಟು ಷ್ಟು ಪ್ರಮಾಣದ ಇಳಿಕೆಯಾಗಿಲ್ಲವೆನ್ನಲಾಗಿದೆ. ಪೂರಕ ಹವಾಮಾನದಿಂದ ಈ ವರ್ಷ ದೇಶ ಕಚ್ಚಾ ಗೋಡಂಬಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿದೆ.

## ಸಾವಯವ ಕೃಷಿ ಉತ್ಪಾದನೆಗಳನ್ನು ದೇಶೀ ಮಟ್ಟದ ಸಹಕಾರಿ ಸಂಘದ ಮೂಲಕ ಮಾರಾಟಕ್ಕೆ ಸರಕಾರದ ಯೋಜನೆ

ಸಾವಯವ ಕೃಷಿ ಉತ್ಪಾದನೆಗಳನ್ನು ದೇಶೀ ಮಟ್ಟದ ಸಹಕಾರಿ ಸಂಘದ ಮೂಲಕ ಮಾರಾಟಕ್ಕೆ ಸರಕಾರ ಯೋಜಿಸಿದೆಯೆನ್ನಲಾಗಿದೆ. ಇದಕ್ಕಾಗಿ ಬಹುರಾಜ್ಯಗಳ ಸಹಕಾರಿ ಸಂಘ ಕಾಯಿದೆ 2022 ಅನ್ವಯ ಸಹಕಾರಿ ಸಂಸ್ಥೆ ಸ್ಥಾಪಿಸಲು ಯೋಜಿಸುತ್ತಿದೆಯೆನ್ನಲಾಗಿದೆ. ಇದರಿಂದ ರೈತರಿಗೆ ಹೆಚ್ಚಿನ ಉಪಯೋಗವಾಗಲಿದೆಯೆನ್ನಲಾಗಿದೆ. ದೇಶೀ ಮತ್ತು ವಿದೇಶೀ ಮಟ್ಟದಲ್ಲಿ ಸಾವಯವ ಉತ್ಪಾದನೆಗಳನ್ನು ಮಾರಾಟ ಮಾಡಲು ಇದರಿಂದ ಸಹಕಾರಿಯಾಗಲಿದೆಯೆನ್ನಲಾಗಿದೆ.